Sandal Koti Building in Chikmagalur.

Q.—631. Sri G. PUTTASWAMY (Chikmagalur-Mudigere—Scheduled Castes).—

Will the Government be pleased to state :—

(*a*) whether it has come to their notice that the Sandal Koti building in Chikmagalur has not yet been handed over to the P.W.D. ;

(*b*) when it was ordered to be handed over to the P.W.D., and the reason as to why the same has not yet been handed over for accommodating the Intermediate College at Chikmagalur ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) (i) On 18th November 1952.

(ii) The District Board has not yet handed over the place where they have their present nursery to the Forest Department to transfer the Sandal Koti to that place and thereby enable the University to occupy the entire premises of the present Sandal Koti for the purposes of, Intermediate College.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕಟ್ಟಡವನ್ನು ಬಿಟ್ಟು ಕೊಡುವಂತೆ ಸರ್ಕಾರಿ ಆಜ್ಞೆ ಹೊರಡಿಸಿದನಂತರವೂ ಸಹ ಆ ಕಟ್ಟಡವನ್ನು ಅವರು ಇನ್ನೂ ಬಿಟ್ಟುಕೊಡದಿರುವ ಕಾರಣ ಅದನ್ನು ಬಿಡಿಸಿಕೊಡಲು ಸರ್ಕಾರದವರು ಏನು ಕಾರ್ಯಕ್ರಮಗಳನ್ನು ಕೈಗೊಂಡಿರುತ್ತೀರಿ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಈ ಕೆಲಸವನ್ನು ಒಂದು ಸೌಹಾರ್ದ ವಾತಾವರಣದಲ್ಲಿ ನಡೆಸಬೇಕೆಂದು ಪ್ರಯತ್ನ ಮಾಡಲಾಗುತ್ತಿದೆ. ಆ ಜಿಲ್ಲಾ ಬೋರ್ಡಿನವರಿಗೆ ವಿಚಾರವನ್ನು ನಾವು ತಿಳಿಸಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಜಿಲ್ಲಾಬೋರ್ಡುಗಳಿಗೆ ಈಗ ಡೆಪ್ಯುಟಿ ಕಮಿಷನರ್‌ಗಳು ಛೇರ್ಮನ್ನರಾಗಿದ್ದಾರಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದರೆ ಮುಂದೆ ಯಾವ ತಕರಾರುಗಳೂ ಬಾರದಿರುವಂತೆ ಈ ಕೆಲಸ ನಡೆಸಬೇಕಾಗಿರುವುದರಿಂದ ಅವರ ಸಹಕಾರಪಡೆದು ಕೊಂಡು ಇದನ್ನು ಮಾಡುವುದು ಉತ್ತಮವೆಂದು ಭಾವಿಸಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ತಾವು ಈ ಬಗ್ಗೆ ಆರ್ಡರನ್ನು ಹೊರಡಿಸುವ ಮುನ್ನ ಆ ಜಿಲ್ಲಾಬೋರ್ಡಿನವರೊಡನೆ ಸಮಾಲೋಚನೆ ಮಾಡಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರೂ ಸಹ ಇದ್ದರೆಂದು ನನಗೆ ಜ್ಞಾಪಕವಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಆಗ ತಾವು ಅವರನ್ನು ಒತ್ತಾಯಮಾಡಿದಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಒತ್ತಾಯಪಡಿಸಲು ನಮಗೆ ಇಷ್ಟವಿಲ್ಲ. ಅಂತೂ ವಿಚಾರವನ್ನು ಅವರಿಗೆ ಸಾಕಷ್ಟು ತಿಳಿಸಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ದಿವಸ ಅವರು ಆ ಕಟ್ಟಡವನ್ನು ಏತಕ್ಕೆ ಬಿಟ್ಟುಕೊಡುತ್ತಿಲ್ಲ ಎಂಬುದನ್ನು ಕೇಳಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೇಳಿದ್ದೇವೆ. ಅದು ಆ ನಂದಲ್‌ಕೋಠಿಗೆ ಬೇಕಾಗಿದೆ ಎಂಬುದಾಗಿ ಅವರು ತಿಳಿಸುತ್ತಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಸರ್ಕಾರ ತನ್ನ ಹುಕುಮನ್ನು ಹೊರಡಿಸುವ ಮೊದಲೇ ಈ ಅಂಶಗಳನ್ನೆಲ್ಲಾ ವಿವರವಾಗಿ ಪರಿಶೀಲನೆ ಮಾಡಬೇಕಾಗಿತ್ತಲ್ಲವೇ ?

Sri A. G. RAMACHANDRA RAO.—I have already submitted that my recollection is that the District Board President was present.

ಶ್ರೀ ಜಿ. ಪುಟ್ಟಸ್ವಾಮಿ.—ಹೀಗೆ ಒಂದು ಗೌರ್ಮೆಂಟ್ ಆರ್ಡರ್ ಆದನಂತರ ಅದನ್ನು ಜಾರಿಗೆ ತರದಿದ್ದರೆ ಆ ಆರ್ಡರಿಗೇನಾದರೂ ಘನತೆ ಉಳಿಯುತ್ತದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದಷ್ಟೂ ಒಂದು ಉತ್ತಮ ಮಾರ್ಗದಲ್ಲಿ ಸೌಹಾರ್ದಯುತವಾದ ರೀತಿಯಲ್ಲಿ ಅವರನ್ನು ಒಪ್ಪಿಸಿಕೊಂಡು ಈ ವಿಚಾರವನ್ನು ಮುಂದುವರಿಸೋಣ ಎಂಬುದಾಗಿ ತೀರ್ಮಾನ ಮಾಡಿಕೊಂಡಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗಲಾದರೂ ಜಾಗ್ರತೆ ತಾವು ಅವರಿಗೆ ಒತ್ತಾಯ ಪಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ತಾವು ಅವರಿಗೆ ಒತ್ತಾಯಮಾಡಿ ಅವರನ್ನು ಒಲಿಸಿಕೊಂಡರೆ ಆಗ ಈ ಕಾರ್ಯ ಬೇಗ ಆಗಬಹುದು.

Harijans of Amuchavadi Village, Chamarajanagar Taluk (Grant of Sites).

Q.—542. Sri U. M. MADAPPA (Chamarajanagar).—

Will the Government be pleased to state :—

(*a*) when the Harijans of Amuchavadi village, Chamarajanagar Taluk, had requested for the acquisition of a suitable place for construction of dwelling quarters to them ;

(*b*) the reasons for not acquiring any place so far for this purpose ;

(*c*) the facilities that could be given to the Harijans in the matter ?